ಆ) ಸರ್ಕಾರ ಹಾಗೂ ನೌಕರರ ಸಂಘಗಳ ನಡುವೆ ಒಡಂಬಡಿಕೆಯಾಗಬೇಕಾಗಿದೆ. ಇದಾದ ನಂತರವೇ ಇತರ ಮಾಹಿತಿಗಳು ಹಾಗೂ ಸಾರಿಗೆ ಸಂಸ್ಥೆಗೆ ಉಂಟಾಗುವ ನಷ್ಟದ ಬಗ್ಗೆ ಅಂತಿಮ ನಿರ್ಣಯವಾಗಬೇಕಾಗಿದೆ.

ಇ) ಬಸ್ ಪಾಸ್ ಸೌಲಭ್ಯವನ್ನು ನಗರ ಸಾರಿಗೆಯಲ್ಲಿ ಒದಗಿಸುವುದರಿಂದ ಸಾರಿಗೆ ಸಂಸ್ಥೆಗೆ ತಗಲುವ ನಷ್ಟವನ್ನು ತುಂಬಿಕೊಡುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಇಲಾಖೆಯ ಲಾಭ ನಷ್ಟ

೩೭೮. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸಾರಿಗೆ ಇಲಾಖೆಯಲ್ಲಿ ೧೯೮೭–೮೮, ೧೯೮೮-೮೯, ೧೯೮೯–೯೦ರಲ್ಲಿ ಆದ ಲಾಭ ಅಥವಾ ನಷ್ಟಗಳೆಷ್ಟು ?

ಆ) ಒಂದು ವೇಳೆ ನಷ್ಟವಾದರೆ ಆ ರೀತಿಯಾಗಲು ಕಾರಣಗಳೇನು ?

ಇ) ಅನಾವಶ್ಯಕವಾಗಿ ಈ ಇಲಾಖೆಯಲ್ಲಿ ಸೋರಿಹೋಗುತ್ತಿರುವುದನ್ನು ನಿಲ್ಲಿಸಲು ಕಟ್ಟಿನಿಟ್ಟಿನ ಕಾರ್ಯಗಳನ್ನು ಸರ್ಕಾರ ಕೈಗೊಂಡಿರುವುದೇ ?

ಈ) ಹಾಗಿದ್ದಲ್ಲಿ ಆ ಕ್ರಮಗಳಾವುವು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿರುವ ನಷ್ಟ ಈ ಕೆಳಕಂಡಂತಿದೆ :

	ಲಕ್ಷ ರೂ.ಗಳಲ್ಲಿ
೧೯೮೭–೮೮ರಲ್ಲಿ	೪೯೯.೫೯
೧೯೮೮–೮೯ರಲ್ಲಿ	೫೪೦.೦೫
೧೯೮೯–೯೦ರಲ್ಲಿ	೪೪೪೬.೦೦ (ಅಂದಾಜು)

ಆ) ನಷ್ಟಕ್ಕೆ ಸಂಬಂಧಪಟ್ಟ ಹಲವು ಮುಖ್ಯ ಕಾರಣಗಳನ್ನು ಈ ಕೆಳಗೆ ವಿವರಿಸಲಾಗಿದೆ :

೧) ಇಂಧನ, ಬಿಡಿಭಾಗಗಳು, ಟೈರುಗಳು ಮುಂತಾದ ಸಾಮಗ್ರಿಗಳ ಬೆಲೆಗಳಲ್ಲಿ ಕಾಲದಿಂದ ಕಾಲಕ್ಕೆ ಆಗಿರುವ ಹೆಚ್ಚಳ.

೨) ರಾಜ್ಯ ಸರ್ಕಾರವು ಘೋಷಿಸಿದ ರೀತ್ಯ, ಕಾಲದಿಂದ ಕಾಲಕ್ಕೆ ಸಿಬ್ಬಂದಿ ವರ್ಗದವರಿಗೆ ನೀಡಲಾಗಿರುವ ತುಟ್ಟಿ ಭತ್ಯಗಳು.

೩) ಕಾರ್ಮಿಕ ಒಕ್ಕೂಟ ಒಡಂಬಡಿಕೆ ಮೇರೆಗೆ ೩–೪ ವರ್ಷಗಳಿಗೊಮ್ಮೆ ಉಂಟಾಗಿರುವ ಸಿಬ್ಬಂದಿ ವರ್ಗದ ವೇತನ ಪರಿಷ್ಕರಣ.

೪) ವಿದ್ಯಾರ್ಥಿಗಳಿಗೆ, ಪತ್ರಕರ್ತರಿಗೆ, ಅಂಧರಿಗೆ, ವಯೋವೃದ್ಧರಿಗೆ ಹಾಗೂ ವಿವಿಧ ರೀತಿಯ ಪ್ರಯಾಣಿಕರಿಗೆ ಉಚಿತ ಪ್ರಯಾಣ ಸೌಲಭ್ಯ ಹಾಗೂ ಸಾರಿಗೆ ದರದಲ್ಲಿನ ರಿಯಾಯಿತಿಗಳು.

೫) ಸಂಸ್ಥೆಯು ಸತತವಾಗಿ ಅನುಭವಿಸುತ್ತಿರುವ ನಷ್ಟದಿಂದಾಗಿ ಆಂತರೀಕ ಸಂಪನ್ಮೂಲಗಳ ಕೊರತೆ ತತ್ಪರಿಣಾಮವಾಗಿ ವಿವಿಧ ವಾಣಿಜ್ಯ ಬ್ಯಾಂಕುಗಳಿಂದ ಸಾಲಿಯಾನ ಶೇಕಡ ೧೪ ರಿಂದ ೧೬ರವರೆಗಿನ ಬಡ್ಡಿಯಂ ದರದಂತೆ ಪಡೆದ ಸಾಲದ ಮೇಲೆ ತೆರಬೇಕಾದ ಬಡ್ಡಿಯ ಹೊರೆ.

೬) ವಾಹನ ತೆರಿಗೆಗಳ ದರಗಳಲ್ಲಿ ಹೆಚ್ಚಳ.

೭) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಂದು ಸಾರ್ವಜನಿಕ ಉದ್ದಿಮೆಯಾಗಿದ್ದು, ಸಂಸ್ಥೆಯ ನೌಕರರಿಗೆ ಉತ್ತಮ ಸಂಬಳ ಭತ್ಯೆಗಳನ್ನು ನೀಡುವ ಪ್ರಯಾಣಿಕರ ಸೌಕರ್ಯಕ್ಕಾಗಿ ಬಸ್ ನಿಲ್ದಾಣ ತಂಗುದಾಣಗಳು ಮುಂತಾದವುಗಳನ್ನು ಒದಗಿಸುವ ಅಲ್ಲದೆ ವಿದ್ಯಾರ್ಥಿ

ಗಳಿಗೆ ವೃದ್ಧರಿಗೆ ಮತ್ತು ಇನ್ನೂ ಮುಂತಾದವರಿಗೆ ರಿಯಾಯಿತಿ ದರದಲ್ಲಿ ಪ್ರಯಾಣ, ಸೌಲಭ್ಯ ಒದಗಿಸುವ ಜವಾಬ್ದಾರಿ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದಿರುತ್ತದೆ.

೬) ಲಾಭದಾಯಕವಲ್ಲದ ನಗರ ಸಾರಿಗೆ ಹೊಣೆಗಾರಿಕೆಯನ್ನು ಹೊತ್ತಿರುವುದು.

೯) ಲಾಭದಾಯಕವಾಗಿರಲಿ ಅಥವಾ ಇಲ್ಲದಿರಲಿ ಗಣನೆಗೆ ತೆಗೆದುಕೊಳ್ಳದೆ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿರುವುದು.

೧೦) ಇಂಧನ, ಟೈರುಗಳು, ಬಿಡಿಭಾಗಗಳು ಮುಂತಾದ ಸಾಮಗ್ರಿಗಳ ಬೆಲೆಗಳಲ್ಲಿ ಹೆಚ್ಚಳ ಉಂಟಾದಾಗಲೆಲ್ಲ ಪ್ರಯಾಣಿಕರ ದರವನ್ನು ಸಂಸ್ಥೆಯು ಸುಲಭವಾಗಿ ಪರಿಷ್ಕರಿಸಲು ಸಾಧ್ಯವಾಗದೆ ಇರುವುದು.

೧೧) ಕೈಗೊಂಡಿದೆ.

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತನ್ನ ಸಾರಿಗೆ ಆದಾಯ ಸೋರಿ ಹೋಗುತ್ತಿರುವುದನ್ನು ನಿಲ್ಲಿಸುವ ಸಲುವಾಗಿ ೩ ಹಂತಗಳ ಪದ್ಧತಿಯ ತನಿಖಾ ದಳಗಳನ್ನು ಕೆಳಕಂಡಂತೆ ರಚಿಸಿದೆ.

೧. ವಿಭಾಗೀಯ ತನಿಖಾದಳ
೨. ಪ್ರಾಂತೀಯ ಮಟ್ಟದ ತನಿಖಾದಳ
೩. ಕೇಂದ್ರೀಯ ತನಿಖಾದಳ.

ಇವುಗಳ ಮೂಲಕ ಸಂಚಾರ ನಿರೀಕ್ಷಕರು ಮತ್ತು ಸಹಾಯಕ ಸಂಚಾರ ನಿರೀಕ್ಷಕರ ಮುಖಾಂತರ ಮಾರ್ಗಗಳಲ್ಲಿ ತನಿಖೆಗಳನ್ನು ನಡೆಸಲ್ಪಡುತ್ತಿದೆ.

ದಕ್ಷಿಣ ಕನ್ನಡದಲ್ಲಿ ತೂಕ ಅಳತೆಯ ಮೊಕದ್ದಮೆಗಳು

೩೭೭. ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೂಕ ಮತ್ತು ಅಳತೆ ಇಲಾಖೆಯವರು ೧೯೮೭–೮೮, ೧೯೮೮–೮೯, ೧೯೮೯–೯೦ರವರೆಗೆ ತನಿಖೆ ನಡೆಸಿ ಎಷ್ಟು ಮೊಕದ್ದಮೆಗಳನ್ನು ಹಾಕಿರುತ್ತಾರೆ. (ವರ್ಷಂಪ್ರತಿ ವಿವರ ನೀಡುವುದು).

ಆ) ಎಷ್ಟು ಮೊಕದ್ದಮೆಗಳಲ್ಲಿ ದಂಡ ವಸೂಲಿಯಾಗಿದೆ? ಇನ್ನೆಷ್ಟು ಬಾಕಿ ನಿದೆ ?

ಇ) ತೂಕ ಅಳತೆಯಲ್ಲಿ ಅನ್ಯಾಯವಾಗದಂತೆ ಬಿಗಿಧೋರಣೆ ಸರ್ಕಾರವು ಮಾಡುವುದೆ ?

ಶ್ರೀ ಆಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ)

೧೯೮೭–೮೮	೧೯೮೮–೮೯	೧೯೮೯–೯೦
೬೩೫	೯೯೮	೧೨೦೫

ಆ)

೧೯೮೭–೮೮	೧೯೮೮–೮೯	೧೯೮೯–೯೦
೪೭೬ (ಹಿಂದಿನ ವರ್ಷ ಮೊಕದ್ದಮೆಗಳು ೪೬–೪೭ ಸೇರಿದೆ)	೯೧೪ (ಹಿಂದಿನ ವರ್ಷ ಮೊಕದ್ದಮೆಗಳು ೪೭–೪೮ ಸೇರಿದೆ)	೧೧೮೫ (ಹಿಂದಿನ ವರ್ಷ ಮೊಕದ್ದಮೆಗಳು ೪೮–೪೯ ಸೇರಿದೆ)

ಅ) ಬಾಕಿ ಇರುವ ಮೊಕದ್ದಮೆಗಳು

೧೯೮೭–೮೮	೧೯೮೮–೮೯	೧೯೮೯–೯೦
೯೦	೫೬	೧೪೭

ಇ) ಹೌದು